ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಮಂತ್ರಿಗಳು) : "1996ನೇ ಸಾಲಿನ ರೋರಿಕ್ ಮತ್ತು ದೇವಿಕಾ ರಾಣಿ ರೋರಿಕ್ ಎಸ್ಟೇಟ್ (ಅರ್ಜನೆ ಮತ್ತು ವರ್ಗಾವಣೆ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ."

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, "1966 ನೇ ಸಾಲಿನ ರೋರಿಕ್ ಮತ್ತು ದೇವಿಕಾ ರಾಣಿ ರೋರಿಕ್ ಎಸ್ಟೇಟ್ (ಅರ್ಜನೆ ಮತ್ತು ವರ್ಗಾವಣೆ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

5.50 ಪಿ.ಎಂ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ನಾನು ತಮಗೆ ಹೇಳಿದ್ದೆ. ವರ್ಗಾವರ್ಗಿ ಬಗ್ಗೆ ಸರ್ಕಾರದ ನೀತಿಯೇನು?

ಉಪಾಧ್ಯಕ್ಷರು : 26 ರಂದು ಅವಿಶ್ವಾಸದ ಮೇಲೆ ಮಾತನಾಡುತ್ತೀರಲ್ಲಾ. ಅವತ್ತು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಈ ರಾಜ್ಯದಲ್ಲಿ ಏನು ನೀತಿ ಇಟ್ಟು ಕೊಂಡಿದ್ದೀರಿ? ಏನು ಮಾಡುತ್ತಿದ್ದೀರಿ?

ಉಪಾಧ್ಯಕ್ಷರು : ಅವರು ಪ್ರಸ್ತಾವನೆಯನ್ನು ಮಾಡಿಬಿಟ್ಟಿದ್ದಾರೆ. ಅದನ್ನು ಅವರು ಓದಿಬಿಡಲಿ.

ಶ್ರೀ ವಾಟಾಳ್ ನಾಗರಾಜ್ : ಇದಾದ ಮೇಲೆ ಆಗಲಿ ಎನ್ನುತ್ತೀರೋ?

14 - ಪ್ರಸ್ತಾವನೆ

ವಿಧಾನ ಮಂಡಲದ ಕಾರ್ಯದರ್ಶಿ ಹುದ್ದೆಯಿಂದ ನಿವೃತ್ತರಾದ ಶ್ರೀ ಎನ್. ಹೆಚ್. ಮುತ್ತಲಗೇರಿರವರ ಸೇವೆಯನ್ನು ದಾಖಲುಗೊಳಿಸುವ ಬಗ್ಗೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ದಿನಾಂಕ 30ನೇ ಜೂನ್ 1995ರಂದು ಕರ್ನಾಟಕ ವಿಧಾನಮಂಡಲದ ಕಾರ್ಯದರ್ಶಿ ಹುದ್ದೆಯಿಂದ ನಿವೃತ್ತಿ ಹೊಂದಿನಂತರ ದಿನಾಂಕ:29-5-96ರ ವರೆಗೆ ಕಾರ್ಯದರ್ಶಿಯಾಗಿ ಮರುನೇಮಕಾತಿಗೊಂಡು ಸೇವೆ ಸಲ್ಲಿಸಿದ ಶ್ರೀ ಎನ್.ಹೆಚ್. ಮುತ್ತಲಗೇರಿಯವರು ತಮ್ಮ ಸೇವಾವಧಿಯಲ್ಲಿ ಈ ಸದನಕ್ಕೆ ಹಾಗೂ ಸಭಾಧ್ಯಕ್ಷರಿಗೆ ನೀಡಿದ ಸಹಕಾರಕ್ಕೆ ಸರ್ಕಾರದ ಹಾಗೂ ವಿಧಾನಸಭೆಯ ಸದಸ್ಯರ ಪ್ರಶಂಸೆಯನ್ನು ದಾಖಲುಗೊಳಿಸಿ ಅದನ್ನು ಅವರಿಗೆ ತಿಳಿಸುವಂತೆ ಮಾನ್ಯ ಸಭಾಧ್ಯಕ್ಷರನ್ನು ಕೋರಬೇಕೆಂದು ಈ ಸದನವು ಪ್ರಸ್ತಾಪಿಸುತ್ತದೆ.

ಪ್ರಸ್ತಾವನೆ ಅಂಗೀಕರಿಸಲ್ಪಟ್ಟಿತು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ.....

ಉಪಾಧ್ಯಕ್ಷರು : 26ನೇ ತಾರೀಖು ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ ಮಾಡುವಾಗ ಮಾತನಾಡುವಿರಂತೆ. ಅವತ್ತು ಎರಡು ದಿವಸ ಇದೆ. ಈಗ ಸಭೆಯನ್ನು ಮುಂದೂಡಿ 26ನೇ ತಾರೀಖು ಸೋಮವಾರ ಬೆಳಿಗ್ಗೆ 10 ಗಂಟೆಗೆ ಪುನಃ ಸಭೆಯು ಸೇರುವುದು.

(ಸದನವು 5-52ಕ್ಕೆ ಮುಕ್ತಾಯಗೊಂಡು ಮತ್ತೆ ದಿನಾಂಕ:26-8-1996 ರಂದು ಸೋಮವಾರ ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು).

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.